ಪಠಮಾಡಿ ಬಹುಮತ ಇದೆ ಎಂದು ಮುಂದುವರಿಸಿಕೊಂಡು ಹೋಗುವುದಾದರೆ ತಾವು ಅನಿವಾರ್ಯವಾಗಿ ನಾವೆಲ್ಲಾ ಹೊರಗಡೆ ಹೋಗಬೇಕಾಗುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಒಂದು ನಿಮಿಷ ಅವಕಾಶ ಕೊಟ್ಟರೆ ನನಗೆ ಗೊತ್ತಿರುವಂಥ ವಿಷಯವನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಸ್ವಲ್ಪ ತಾಳಿ, ಈ ಮಾನ್ಯ ಬೈರೇಗೌಡರು ಹೇಳಿದರಲ್ಲಿ ಸ್ವಲ್ಪ ತಪ್ಪಿದೆ. ಇದರಲ್ಲಿ, I think you said Rs. 500 crores. I could not hear him. ಅದು 500 ಕೋಟಿ ರೂಪಾಯಿ ಎನ್ನತಕ್ಕಂಥ ಮಾತನ್ನು ಹೇಳಿದರು. ನೋ ನೋ ಕಂಟಿನ್‌ಜೆನ್ಸಿ ಫಂಡ್ 500 ಕೋಟಿ ರೂಪಾಯಿಗಳೆಂದು ನೀವು ಹೇಳಿದಿರಿ. ನಾನು ಸರಿಯಾಗಿ ಕೇಳಲಿಲ್ಲ. Iam sorry, ಅದು 500 ಕೋಟಿ ರೂಪಾಯಿಗಳಲ್ಲ. ತಾವು ತಪ್ಪಾಗಿ ತಿಳಿದುಕೊಂಡಿರುತ್ತೀರಿ. ಅಕ್ಚುಯಲಿ ಸ್ಟೇಟ್ ಲೆಜಿಸ್ಲೇಚರ್ ಅಪ್ರೂವಲ್ ಮಾಡಿರತಕ್ಕಂಥದ್ದು 80 ಕೋಟಿ. State Legislature approved Rs. 80 crores. We have already spent about Rs. 65 crores. Because it is the beginning of the year, that has necessitated us to present this before the august House.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳು ಏತಕ್ಕೆ ಅವಸರ ಮಾಡುತ್ತಿದ್ದಾರೆಂಬುದು ಗೊತ್ತಿಲ್ಲ. ಇದು ಗೊತ್ತಿದ್ದ ವಿಚಾರ, ಮೇಲ್ಮನೆಯಲ್ಲಿ ಇವತ್ತು ಆಗುವುದಿಲ್ಲವೆಂದು ಹೇಳಿದ್ದಾರೆ. ನಾಳೆ ಅದರ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಆದರೂ ಇವತ್ತೇ ಏತಕ್ಕೆ ಅವಸರ ಮಾಡುತ್ತಾರೆಂದು ನನಗೆ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮೇಲ್ಮನೆಯವರು ಕೂಡ ಇಲ್ಲಿ ಪಾಸ್ ಮಾಡುವ ದೃಷ್ಟಿಯಿಂದ ಕಾಯುತ್ತಿದ್ದಾರೆ. ತಾವು ಒಂದೊಂದು ಸಾರಿ ಇರುವುದಿಲ್ಲ, ಅದೇ ನಮಗೆ ಬಹಳ ತಾಪತ್ರಯವಾಗಿದೆ. ಆದುದರಿಂದ, ತಮ್ಮ ಅನುಮತಿ ಪಡೆದು ನಾನು ಇದನ್ನು ಚರ್ಚೆಗೋಸ್ಕರ ಇಡುತ್ತಿದ್ದೇನೆ ಚರ್ಚೆಯ ಬಗ್ಗೆ ಒಂದೇ ಮಾತು....

ಶ್ರೀ ಸಿ. ಬೈರೇಗೌಡ : ಈ ಸದನದಲ್ಲಿ ಕುಳಿತು ಬಹಳ ಪರಿಣಾಮಕಾರಿಯಾಗಿ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಇದ್ದೆ.....

ಶ್ರೀ ಎಸ್. ಬಂಗಾರಪ್ಪ : ಬೇರೆ ಉದ್ದೇಶ ಇಟ್ಟು ಮಾಡಬೇಕೆಂದರೆ ಮಾಡಿ ನಾನು ಏನು ಮಾಡಲಿ.....

(ಗೊಂದಲ)

ಶ್ರೀ ಸಿ. ಬೈರೇಗೌಡ : ರಕ್ಷಿಪೈಡ್ ಸ್ಪಿರಿಟ್‌ನಲ್ಲಿ 8 ಕೋಟಿ ರೂಪಾಯಿ ಕೊಡುವುದಕ್ಕೆ ಹೊರಟಿದ್ದಾರೆ. ಬಾಟ್ಲಿಂಗ್ ಚಾರ್ಜಸ್ ಜಾಸ್ತಿ ಮಾಡಿದ್ದಾರೆ. ಸರ್ಕಾರದ ಬೊಕ್ಕಸದ ಹಣವನ್ನು ಲೂಟಿ ಮಾಡುತ್ತಿದ್ದರೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೆ ಹೇಗೆ?

ಉಪಾಧ್ಯಕ್ಷಿಣಿಯವರು : ಇಷ್ಟು ಹೊತ್ತಿಗೆ 4–5 ಜನ ಮಾತನಾಡಬಹುದಾಗಿತ್ತು. ಚರ್ಚೆಯಾದರೂ ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಈ ಸರ್ಕಾರವನ್ನು ಸಾರಾಯಿ ಸರ್ಕಾರ ಎಂದು ಕರೆಯುತ್ತಿದ್ದಾರೆ. ಅದಕ್ಕೆ 8 ಕೋಟಿ ರೂಪಾಯಿ ಸರ್ಕಾರದ ಬೊಕ್ಕಸದಿಂದ ಪಾವತಿಯಾಗುತ್ತಿದೆ. 8 ಕೋಟಿ ರೂಪಾಯಿಗಳನ್ನು ಕೊಡುತ್ತಿರುವಾಗ ನಾವು ಇದರಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಬೊಕ್ಕಸದಿಂದ ಹಣ ಸೋರಿ ಹೋಗುತ್ತಿದೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಇದು ನಮಗೆ ಇಷ್ಟವಿಲ್ಲದಿದ್ದರೆ ಅನಿವಾರ್ಯವಾಗಿ ಹೊರಗಡೆ ಹೋಗಬೇಕಾಗುತ್ತದೆ.

(ಗೊಂದಲ)

(ಬಿ.ಜೆ.ಪಿ. ಮಾನ್ಯ ಸದಸ್ಯರು, ಶ್ರೀ ಬೈರೇಗೌಡರು, ಶ್ರೀ ವಾಟಾಳ್ ನಾಗರಾಜ್ ಅವರು ಈ ಸಂದರ್ಭದಲ್ಲಿ ಸಭಾತ್ಯಾಗ ಮಾಡಿದರು)